ಇ) ಅನಧಿಕೃತವಾಗಿ ಗೋಡೆ ಹಾಗೂ ಕಟ್ಟಡಗಳನ್ನು ನಿರ್ಮಿಸಿ ಸಾರಿಗೆ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆ ಕೊಟ್ಟಿರುವವರ ಮೇಲೆ ಯೋಗ್ಯ ಕ್ರಮ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ಬಂದಿದೆ

ಆ) ನದರಿ ರಸ್ತೆಯಲ್ಲಿಯ ಅನಧಿಕೃತ ಗೋಡೆ ಹಾಗೂ ಕಟ್ಟಡದ ಭಾಗಗಳನ್ನು ಆಪರೇಶನ್ ಘಟವಾತ್ ವೇಳೆಯಲ್ಲಿ ತೆಗೆದುಹಾಕಿ ಸಾರ್ವಜನಿಕರಿಗೆ ಹಾಗೂ ಸಾರಿಗೆ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ ಹಾಗೂ ಮಧ್ಯದಲ್ಲಿ ಮಿಡಿಯನ್ ಅಳವಡಿಸಿ ಸಾರಿಗೆ ಸಂಚಾರಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಡಲಾಗಿದೆ

ಇ) ಕೆಎಂಸಿ ಕಾಯ್ದೆ 288(ಡಿ) ಪ್ರಕಾರ ಕ್ರಮ ಕೈಗೊಳ್ಳ-ಲಾಗಿರುವುದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

971 (1260) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಕೇಂದ್ರ ಹಾಗೂ ರಾಜ್ಯ ಸರಕಾರ ಯಾವ ಯಾವ ಯೋಜನೆಗಳಿಗೆ ಹಣವನ್ನು ನೀಡುತ್ತದೆ,

ಆ) ಈಗಾಗಲೇ ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ, ಹಾಗೂ ಈಗ ಉಳಿದಿರುವ ಅನುದಾನ ಎಷ್ಟು,

ಇ) ಶಿಗ್ಗಾಂವ ಹಾಗೂ ಸವಣೂರ ಪಟ್ಟಣಗಳಲ್ಲಿರುವ ಕ್ರೀಡಾಂಗಣ ನಿವೇಶನಗಳು ಸಾರ್ವಜನಿಕರಿಂದ ಅತಿಕ್ರಮಣವಾದ ನಿವೇಶನಗಳನ್ನು ತೆರವುಗೊಳಿಸದಿರಲು ಕಾರಣಗಳೇನು,

ಈ) ಹಾಗಿದ್ದಲ್ಲಿ ಅತೀಕ್ರಮಣವನ್ನುಗೊಳಿಸಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ,

ಉ) ಶಿಗ್ಗಾಂವ-ಸವಣೂರು ತಾಲ್ಲೂಕುಗಳಲ್ಲಿ ದೈಹಿಕ ಶಿಕ್ಷಣ ಶಾಲೆ ಇಲ್ಲದೇ ಇರುವುದು ಸರ್ಕಾರದ ಗಮನದಲ್ಲಿದೆಯೇ,

ಊ) ಬಂದಿದ್ದಲ್ಲಿ, ದೈಹಿಕ ಶಿಕ್ಷಣ ಶಾಲೆಯನ್ನು ಸವಣೂರು ಪಟ್ಟಣದಲ್ಲಿ ಸ್ಥಾಪಿಸಲು ಸರ್ಕಾರ ಯೋಗ್ಯ ಕ್ರಮ ಯಾವಾಗ ಕೈಗೊಳ್ಳುತ್ತದೆ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಅ) ಕೇಂದ್ರ ಸರ್ಕಾರವು ಕ್ರೀಡಾ ಮೂಲಭೂತ ಸೌಕರ್ಯವನ್ನು ನಿರ್ಮಿಸಲು ಕೇಂದ್ರ ಪುರಸ್ಕೃತ ಯೋಜನೆಯಡಿ ನೀಡುತ್ತಿದ್ದ ಅನುದಾನವನ್ನು 1–4–2005 ರಿಂದ ಸ್ಥಗಿತಗೊಳಿಸಿರುತ್ತದೆ ಅನುಬಂಧ 'ಅ' ದಲ್ಲಿ ತೋರಿಸಿದಂತೆ ಇರುವ ಯೋಜನೆಗಳಿಗೆ ಹಣ ನೀಡಿ ಜಿಲ್ಲಾ ಪಂಚಾಯತ್‌ಯಡಿ ಜಾರಿಗೊಳಿಸಲಾಗುತ್ತಿದೆ ರಾಜ್ಯ ವಲಯದಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳನ್ನು ಅನುಬಂಧ–ಕ ದಲ್ಲಿ ನೀಡಲಾಗಿದೆ

ಆ) ಯೋಜನೆಗಳನ್ನು ರಾಜ್ಯ ವಲಯದಿಂದ ಜಿಲ್ಲಾ ಪಂಚಾಯತ್‌ಗಳಿಗೆ ವರ್ಗಾಯಿಸಿರುವುದರಿಂದ ಅನುಷ್ಠಾನಗೊಳಿಸಲು ಅನುದಾನ ಕಲ್ಪಿಸುವುದು ಸಹ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ ಅನುಬಂಧ 'ಕ' ದಲ್ಲಿ ತೋರಿಸಿರುವ ಯೋಜನೆಗಳನ್ನು ರಾಜ್ಯ ವಲಯದಡಿ ಜಾರಿಗೊಳಿಸಲಾಗುತ್ತಿದೆ

ಇ) ಶಿಗ್ಗಾಂವ ಪಟ್ಟಣಗಳಲ್ಲಿ ಕ್ರೀಡಾಂಗಣ ನಿವೇಶನ ಜಾಗದಲ್ಲಿ ಅತಿಕ್ರಮಿಸಿರುವ ಜಾಗವನ್ನು ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಅಸ್ತಿತ್ವದಲ್ಲಿರುವ ಕ್ರೀಡಾಂಗಣ ಸಮಿತಿಯು ಈಗಾಗಲೇ ತೆರವುಗೊಳಿಸಿರುತ್ತದೆ ಹಾಗೂ ಸವಣೂರು ಪಟ್ಟಣದ ಅತಿಕ್ರಮಿಸಿದ ಕ್ರೀಡಾಂಗಣ ಜಾಗವನ್ನು ತೆರವುಗೊಳಿಸುವ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ

ಈ) ಸವಣೂರು ತಾಲ್ಲೂಕು ಕ್ರೀಡಾಂಗಣ ಕಾರ್ಯ 2007–08ನೇ ಸಾಲಿನಲ್ಲಿ ಹಾಗೂ ಶಿಗ್ಗಾಂವ 2008–09ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ

ಉ) ಈ ವಿಷಯವು ಯುವಜನ ಸೇವಾ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ

ಊ) ಈ ವಿಷಯವು ಯುವಜನ ಸೇವಾ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ

ಅನುಬಂಧ–ಅ

ಕ್ರೀಡೆಗಳು ಮತ್ತು ಯುವಜನ ಸೇವೆಗಳು 2204 ಯೋಜನಾ ಕಾರ್ಯಕ್ರಮಗಳು		
1	ಗ್ರಾಮೀಣ ಕ್ರೀಡಾ ಕೇಂದ್ರಗಳು 2204–00–104–0–06	

2	ಕ್ರೀಡಾ ಶಾಲೆಗಳು 2204–00–104–0–17	
3	ಕ್ರೀಡಾಕೂಟ ಮತ್ತು ರ್ಯಾಲಿಗಳ ಸಂಘಟನೆ ಹಾಗೂ ಇದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ 2204–00–104–0–19	
4	ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ 2204–00–104–0–20	ಜಿಲ್ಲಾ ಮಟ್ಟದಲ್ಲಿ ಕ್ರೀಡಾಂಗಣಗಳ ನಿರ್ಮಾಣ 2204–00–104–0–01
5	ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ 2204–00–104–0–21	
6	ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನಗಳು 2204–00–104–0–10	
	ರಾಜ್ಯ ವಲಯದಿಂದ ವರ್ಗಾವಣೆಗೊಂಡ ಕಾರ್ಯಕ್ರಮಗಳು	
7	ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳು ಮತ್ತು ಕುಸ್ತಿಗಾರರಿಗೆ ಆರ್ಥಿಕ ನೆರವು 2204–00–800–0–12	

ಕ್ರೀಡೆ ಮತ್ತು ಯುವಜನ ಸೇವೆಗಳು 2204–ಯೋಜನೇತರ ಕಾರ್ಯಕ್ರಮಗಳು

1	ಸಹಾಯಕ ಯುವಜನ ಸೇವಾ ಅಧಿಕಾರಿ, 2204–00–001–0–03
2	ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ 2204–00–104–0–05
3	ಕ್ರೀಡಾ ಸಾಮಗ್ರಿ ಖರೀದಿಗಾಗಿ ಜಿಲ್ಲಾ ಮತ್ತು ವಿಭಾಗೀಯ ಯುವಜನ ಸೇವೆಗಳ ಮಂಡಳಿಗೆ ಸಹಾಯಕ 2204–00–104–0–07
4	ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಕ್ರೀಡಾ ಬಯಲುಗಳನ್ನು ಅಭಿವೃದ್ಧಿಗೊಳಿಸಲು ವಿದ್ಯಾ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ, 2204–00–104–0–10

5	ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ 2204–00–104–0–21

ಯುವಜನ ಸೇವಾ ಮತ್ತು ಕ್ರೀಡಾ ವಾಣಿಜ್ಯ ಘಟಕದಡಿಯಲ್ಲಿ 2006–07ನೇ ಸಾಲಿನಲ್ಲಿ ಯೋಜನೆ ಅಡಿಯಲ್ಲಿ ಒದಗಿಸಲಾಗಿರುವ ಹಣದಲ್ಲಿ 2007ರ ತನಕ ಬಿಡುಗಡೆ ಮಾಡಿರುವ ಹಣ ಮತ್ತು ವೆಚ್ಚದ ವಿವರಗಳು

ಅನುಬಂಧ – ಕ

(ರೂ ಲಕ್ಷಗಳಲ್ಲಿ)

Sl No	Name of the Scheme ಯೋಜನೆಯ ಹೆಸರು	Budget 2006-07	Amt Released Up in Jan 07	Exp up to 31st Jan 07
1	2	3	4	5
1	2204-00-2-03 Incentive Scholarship to High School Students a 059 Other Expenditure Student Welfare Scheme ವಿದ್ಯಾರ್ಥಿ ಕಲ್ಯಾಣ ಯೋಜನೆ b 059 State Level Youth Festival ರಾಜ್ಯ ಮಟ್ಟದ ಯುವಜನೋತ್ಸವ c 117 ಕ್ರೀಡಾಪಟುಗಳಿಗೆ ವಿದ್ಯಾರ್ಥಿ ವೇತನ Incentive Scholarship	3 00 3 00 5 00	3 00 3 00 5 00	- - -
2	2204-00-103-0-02 059 Other Expenditure State Youth Centre ರಾಜ್ಯ ಯುವಕ ಕೇಂದ್ರ	4 00	4 00	1 05
3	2204-00-103-0-11 Bharath Scouts 101 GIA ಭಾರತ್ ಸ್ಕೌಟ್	105 00	70 00	50 00

1	2	3	4	5
4	2204-00-103-0-12 Girl Guides 101 GIA ಗರ್ಲ್ ಗೈಡ್ಸ್ ಸಹಾಯಾನುದಾನ	5 00	5 00	3 40
5	2204-00-103-0-18-059 Other Exp In house Activities at State Youth Centre- a) ರಾಜ್ಯ ಯುವಕ ಕೇಂದ್ರದಲ್ಲಿ ಒಳಾಂಗಣ ಚಟುವಟಿಕೆ ಬ ಜಿಲ್ಲಾ ಯುವ ಪ್ರಶಸ್ತಿ ಸಿ ಯುವಜನ ಸಮ್ಮೇಳನ ಕಾರ್ಯಾಗಾರ ಮತ್ತು ಯುವ ತರಬೇತಿ ಶಿಬಿರ	5 00 20 00 30 00	5 00 - -	0 86 - -
6	2204-00-103-0-26-059 other Expenditure Rajeevgandhi Yuva Shakthi Sangha 059 ಇತರೆ ಖರ್ಚು ರಾಜೀವ್‌ಗಾಂಧಿ ಯುವ ಶಕ್ತಿ ಸಂಘ	305-00	305 00	150 00
7	2204-00-104-0-01 059 Other Exp Gurunanak Bhavan – ಗುರುನಾನಕ್ ಭವನ್	10-00	10 00	6 34
8	2204-00-104-0-02 015 Subsidary Expenses Promotion of Sports Activities ಕ್ರೀಡಾಚಟುವಟಿಕೆಗಳ ಪ್ರೋತ್ಸಾಹ 015 ಮೂರಕ ವೆಚ್ಚಗಳು a Cash Award ನಗದು ಪ್ರಶಸ್ತಿ b Legislature Sports ಶಾಸಕರ ಕ್ರೀಡಾಕೂಟ	50-00 1-50	50 00 1 50	- -

1	2	3	4	5
9	2204-00-104-0-25 Sports Institutions and Hostels ಕ್ರೀಡಾ ಶಾಲೆ ಮತ್ತು ನಿಲಯ ನಿರ್ವಹಣೆ a) Pay & allowance ವೇತನ ಮತ್ತು ಇತರೆ ಭತ್ಯೆಗಳು	12 46	12 46	8 73
	b) Institution & Hostel Mantenance 051 General Exp			
	ಅ ಕ್ರೀಡಾ ಶಾಲೆ ಮತ್ತು ನಿಲಯ ನಿರ್ವಹಣೆ 051 ಸಾಮಾನ್ಯ ವೆಚ್ಚ ಆ ವಿದ್ಯಾನಗರ ಆವರಣ ಅಭಿವೃದ್ಧಿ	66 54 10 00	76 54	42 08 7 59 50 67
	c) Youth Hostel 101 GLA ಯುವಜನ ವಸತಿ ನಿಲಯ	2 50	2 50	2 25
10 a	2204-00-104-0-29 Sports Anthony of Karnataka General Thimmaiah National Academy of Adventure 101 GLA ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ 101 ಸಹಾಯಾನುದಾನ	8 00	8 00	8 00
b	Development of Youth Training Campas -059 Other Expenditure ಕುಂಬಳಗೂಡು ತರಬೇತಿ ಕೇಂದ್ರದ ಅಭಿವೃದ್ಧಿ – 059 ಇತರೆ ವೆಚ್ಚಗಳು	7 00	7 00	6 87
c	ಕರ್ನಾಟಕ ಕ್ರೀಡಾ ಪ್ರಾಧಿಕಾರ 101 ಸಹಾಯಾನುದಾನ	125-00	125 00	90 00

1	2	3	4	5
11	2204-00-104-0-32 059 ಇತರೆ ವೆಚ್ಚ ಗ್ರಾಮೀಣ ಕ್ರೀಡೆ ಮತ್ತು ಪಂದ್ಯಗಳು	100 00	98 74	49 37
12	2204-00-796-0-01 423 Tribal Area Sub Plan ಗಿರಿಜನ ಉಪಯೋಜನೆ	15 00	-	Amt Pooled
13	2204-00-800-0-15-422 Special component Plan ವಿಶೇಷ ಘಟಕ ಯೋಜನೆ	60 00	-	Amt Pooled
14	2204-00-800-0-17 Publicity Campaign 051 Gen Expenditure ಪ್ರಚಾರಾಂದೋಲನ 051 ಸಾಮಾನ್ಯ ವೆಚ್ಚಗಳು	4 00	4 00	3 22
15	2204-00-800-18 Inservice Training Programme 015 Subsidary Expenses ನೇವೆಯಲ್ಲಿರುವ ಅಧಿಕಾರಿಗಳಿಗೆ/ ತರಬೇತುದಾರರಿಗೆ ತರಬೇತಿ ಕಾರ್ಯಕ್ರಮ 015 ಮೂರಕ ವೆಚ್ಚಗಳು Total	2 00 959-00	2,00	1 55
	Central Assistance			
16	2204-00-104-0-11 Central Sector Scheme ಕೇಂದ್ರ ವಲಯ ಯೋಜನೆ	100 00	-	-
17	4202-03-102-0-02-286 ಬಂಡವಾಳ ವೆಚ್ಚ Capital Expenditure Medikeri Hockey Stadium ಮಡಿಕೇರಿ ಹಾಕಿ ಕ್ರೀಡಾಂಗಣ	100 00	-	-

1	2	3	4	5
18	4202-03-102-0-03-386 ಬಂಡವಾಳ ವೆಚ್ಚ Capital Expenditure Indoor Stadium ಒಳಾಂಗಣ ಕ್ರೀಡಾಂಗಣ	100 00	100 00	50 00
	Grand Total	**1259 00**	**897 74**	**482 31**

972 (583) ಶ್ರೀ ಸುರೇಶ್ ಎನ್ ಮಾರಿಹಾಳ (ಕಿತ್ತೂರು) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಹುಬ್ಬಳ್ಳಿಯ ವಾ ಕ ರ ಸಾ ಸಂಸ್ಥೆಯಲ್ಲಿ ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆ ಭರ್ತಿ ಮಾಡುವುದನ್ನು ನಿಷೇಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು,

ಇ) ನದ್ಯಕ್ಕೆ ವಾ ಕ ರ ಸಾ ಸಂಸ್ಥೆಯಲ್ಲಿ ಖಾಲಿ ಇರುವ ಕಿರಿಯ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು,

ಈ) ಕಿರಿಯ ಸಹಾಯಕರ ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಕೋರಿ ಬಂದ ಅರ್ಜಿಗಳೆಷ್ಟು,

ಉ) ಸದರಿ ಹುದ್ದೆಗಳ ಭರ್ತಿ ಮಾಡುವ ಪ್ರಕ್ರಿಯೆ ಪುನಃ ಪ್ರಾರಂಭಿಸುವ ವಿಚಾರ ಸರ್ಕಾರಕ್ಕೆ ಇದೆಯೇ,

ಊ) ಹಾಗಿದ್ದಲ್ಲಿ, ಹುದ್ದೆಗಳ ಭರ್ತಿ ಮಾಡುವ ಪ್ರಕ್ರಿಯೆ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ

ಆ) ಸಂಸ್ಥೆಯ ವ್ಯಾಪ್ತಿಯ ವಿಭಾಗ ಮತ್ತು ಘಟಕಗಳಲ್ಲಿನ ದೈನಂದಿನ ಆಡಳಿತ ವ್ಯವಹರಣೆಯಲ್ಲಿ ಗಣಕಯಂತ್ರಗಳನ್ನು ಅಳವಡಿಸಲಾಗಿದೆ ಅಲ್ಲದೆ, ನಿರ್ವಾಹಕರಿಗೆ ಟಿಕೇಟು ವಿತರಣೆಗೆ ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳನ್ನು ನೀಡಿರುವುದರಿಂದ ಇದಕ್ಕ ಸಂಬಂಧಪಟ್ಟ ಘಟಕದಲ್ಲಿನ ಕೆಲಸಗಳು ಗಣನೀಯವಾಗಿ ಕಡಿಮೆಯಾಗಿರುತ್ತವೆ ಇದಲ್ಲದೆ, ಸಿಬ್ಬಂದಿ ವೆಚ್ಚವನ್ನು ಕಡಿಮೆಗೊಳಿಸಲು ಸಿಬ್ಬಂದಿ ಅನುಪಾತವನ್ನು ಕಡಿಮೆ ಮಾಡುವುದು ಸಂಸ್ಥೆಯ